# ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮
ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೪೮೪ ಫ್ಯಾಕ್ಸ್ : ೨೬೫೨೩೮೬೭
http://www.kasapa.in e-mail : kannadaparishattu@gmail.com

ಕ್ರಮಸಂಖ್ಯೆ : ಕಸಾಪ / **ಪ್ರಕಟಣೆ**/ ೨೦೨೩–೨೪ ದಿನಾಂಕ : ೧೯-೦೮-೨೦೨೩

*ಇವರಿಗೆ*
**ಸಂಪಾದಕರು / ಮುಖ್ಯ ವರದಿಗಾರರು**
...............................................ಬೆಂಗಳೂರು

ಪ್ರಕಟಣೆಯ ಕೃಪೆಗಾಗಿ

**ಕನ್ನಡ ಸಾಹಿತ್ಯ ಪರಿಷತ್ತಿನ ಹೊಸ ಕಾರ್ಯಕ್ರಮ 'ಕನ್ನಡದ ಧ್ರುವತಾರೆ'ಯಲ್ಲಿ ಮಿಂಚಿದ ನಟ ರಮೇಶ್ ಅರವಿಂದ್**

## ಪಾರಂಪರಿಕ ಬೇರಿನ ಆಳದೊಂದಿಗೆ ಹೊಸತನದ ಚಿಗುರನ್ನು ಹುಟ್ಟಿಸುವ ಕನಸು ಪರಿಷತ್ತಿನದು- ನಾಡೋಜ ಡಾ. ಮಹೇಶ ಜೋಶಿ

ಬೆಂಗಳೂರು: ಪಾರಂಪರಿಕ ಬೇರಿನ ಆಳದೊಂದಿಗೆ ಹೊಸತನದ ಚಿಗುರನ್ನು ಹುಟ್ಟಿಸುವ ಮೂಲಕ ಏಳು ಕೋಟಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತನ್ನು ಜನಸಾಮಾನ್ಯ ಪರಿಷತ್ತನ್ನಾಗಿಸುವ ನಿಟ್ಟಿನಲ್ಲಿ ಹೊಸ ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ನಿರಂತರ ಸಾಧನೆ ಮಾಡುತ್ತ ತೆರೆಯ ಮರೆಯಲ್ಲಿ ಇರುವ ಸಾಧಕರನ್ನು ಕರೆಸಿ ಜನರೊಂದಿಗೆ ಸಂವಾದ ಮಾಡುವ ಮೂಲಕ ಅವರ ಸಾಧನೆಯನ್ನು ಸಮಾಜಕ್ಕೆ ತೋರಿಸುವ ಜೊತೆಗೆ ಇನ್ನೂ ಹತ್ತಾರು ಜನರು ಅವರಿಂದ ಪ್ರೇರಣೆಗೊಳ್ಳಬೇಕು ಎಂಬುದು ಕನ್ನಡ ಸಾಹಿತ್ಯ ಪರಿಷತ್ತಿನ ಮಹದಾಸೆ ಎಂದು **ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ** ಅವರು ತಿಳಿಸಿದರು.

ಇಂದು ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡ ವಿನೂತನ ಹಾಗೂ ವಿಶಿಷ್ಟ ಮಾದರಿ ಕಾರ್ಯಕ್ರಮ **'ಕನ್ನಡದ ಧ್ರುವತಾರೆ-ಸಾಧಕರೊಂದಿಗೆ ಮಾತು-ಕತೆ'** ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. **ಕನ್ನಡದ ಧ್ರುವತಾರೆ ಕಾರ್ಯಕ್ರಮದ** ಮೂಲಕ ಕನ್ನಡ ನಾಡಿನ ವಿವಿಧ ಕ್ಷೇತ್ರದಲ್ಲಿ ಅಜ್ಞಾತವಾಗಿ ಅಗಣಿತ ಸೇವೆ ಸಲ್ಲಿಸುತ್ತಿರುವವರನ್ನು ಗುರುತಿಸಲಾಗುತ್ತಿದೆ. ಅವರೊಂದಿಗೆ ಪರಿಷತ್ತು ಹಾಗೂ ಸಾರ್ವಜನಿಕರು ಸಂವಾದ ನಡೆಸುವ ಮೂಲಕ ಸಾಧಕರ ಅನುಭವಗಳನ್ನು ನಾಡಿನ ಜನರಿಗೆ ತಿಳಿಸುವ ಕೆಲಸಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಮುಂದಾಗಿದೆ. ಈ ಕಾರ್ಯಕ್ರಮ ಕನ್ನಡದ ಸಾಧಕರು ಮತ್ತು ಯುವ ಜನತೆ, ಜನಸಾಮಾನ್ಯರ ನಡುವಿನ ಕೊಂಡಿಯಾಗಿರಲಿದೆ ಈ ಕಾರ್ಯಕ್ರಮ. ಕನ್ನಡದ ಧ್ರುವತಾರೆ ಕಾರ್ಯಕ್ರಮವು ಪ್ರತಿ ತಿಂಗಳೂ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆಸಲು ತೀರ್ಮಾನಿಸಲಾಗಿದ್ದು, ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರೇ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ನಾಡಿನ ಕನ್ನಡ ಮೂಲದ ಸಾಧಕರು ಪರಿಷತ್ತು ಆಯೋಜಿಸುವ **'ಕನ್ನಡದ ಧ್ರುವತಾರೆ'** ವಿಶಿಷ್ಟ ಮಾದರಿ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಅನುಭವಗಳನ್ನು ಹಂಚಿಕೊಳ್ಳಲಿದ್ದಾರೆ. ಸಾಧಕರೊಂದಿಗೆ ಸಾರ್ವಜನಿಕರು ಸಹ ಪ್ರಶ್ನೆಗಳನ್ನು ಕೇಳುವ ಮೂಲಕ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಬಹುದಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ **'ಕನ್ನಡದ ಧ್ರುವತಾರೆ'** ಕಾರ್ಯಕ್ರಮವು ಸಾಧಕರ ಮತ್ತು ಸಾರ್ವಜನಿಕರ ನಡುವೆ ಸುವರ್ಣ ಸೇತುವೆಯಾಗುವ ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾಗಿದೆ ಎಂದು **ನಾಡೋಜ ಡಾ. ಮಹೇಶ ಜೋಶಿ** ಅಭಿಪ್ರಾಯಪಟ್ಟರು.

ಕನ್ನಡದ ಧ್ರುವತಾರೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ, ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ **ಡಾ. ಸಿ.ಎನ್. ಮಂಜುನಾಥ** ಅವರು ಸಾಧನೆ ಇಲ್ಲದೇ ಸತ್ತರೆ ಅಂತಹ ಸಾವಿಗೆ ಅರ್ಥವಿಲ್ಲ,

ಏನೂ ಇಲ್ಲದೇ ಸತ್ತರೇ ವ್ಯವಸ್ಥೆಗೆ ಅರ್ಥವಿಲ್ಲ. ಆದ್ದರಿಂದ ಸಾಧನೆ ಮಾಡುವವರು ತಾಳ್ಮೆಯಿಂದ ನಿರಂತರ ಪ್ರಯತ್ನದಲ್ಲಿ ಇದ್ದಾಗ ಸಾರ್ಥಕ ಸಾಧಕರಾಗಲು ಸಾಧ್ಯ, ತಕ್ಷಣ ಸಾಧನೆಯ ಉತ್ತುಂಗಕ್ಕೆ ಏರಬೇಕು ಎನ್ನುವವರು ಅಷ್ಟೇ ಬೇಗನೆ ಕೆಳಗೆ ಬಿದ್ದು ಬಿಡುತ್ತಾರೆ. ನಿರಂತರ ಪ್ರಯತ್ನ ಮಾಡುವವರು ನಿಜವಾದ ಸಾಧಕರಾಗುತ್ತಾರೆ. ಸಮಾಜದಲ್ಲಿ ಸಕಾರಾತ್ಮಕ ಭಾವನೆ ಕಡಿಮೆಯಾಗುತ್ತಿದೆ. ನಕಾರಾತ್ಮಕ ಭಾವನೆಗಳು ಹೆಚ್ಚಾಗುತ್ತಿವೆ. ನಕಾರಾತ್ಮಕ ಭಾವನೆ ಇದ್ದವರು ಸಾಮಾಜಿಕ ಭಯೋತ್ಪಾದಕರಂತೆ. ಮುಗುಳು ನಗು ಎನ್ನುವುದು ನಮ್ಮಿಂದ ದೂರವಾಗಿದೆ. ಇದ್ದದ್ದು ಹಂಚಿ ತಿನ್ನಬೇಕೆ ಹೊರತು, ಕಸಿದು ತಿನ್ನಬಾರದು. ಹಳಸಿದ್ದು ಕೊಡಲೇಬಾರದು, ಬದಲಿಗೆ ಉಳಿಸಿದ್ದು ಕೊಡಬೇಕು ಎನ್ನುವ ತಾತ್ವಿಕ ಮಾತುಗಳನ್ನು ಹೇಳಿದರು.

**'ಕನ್ನಡದ ಧ್ರುವತಾರೆ'** ಕಾರ್ಯಕ್ರಮದಲ್ಲಿ ಮೊದಲ ಅತಿಥಿಯಾಗಿ ಭಾಗವಹಿಸಿದ ಖ್ಯಾತ ಚಲನಚಿತ್ರ ನಟ **ಶ್ರೀ ರಮೇಶ್ ಅರವಿಂದ್** ಅವರು ಸಾರ್ವಜನಿಕರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತ ಕಲಾವಿದನಾಗಿದ್ದು ನನ್ನ ಅದೃಷ್ಟ. ಬೇರೆ ಯಾವ ಕ್ಷೇತ್ರವನ್ನು ಆಯ್ಕೆ ಮಾಡಿ ಕೊಂಡಿದ್ದರೂ ಇಂತಹ ಜನಪ್ರೀತಿ ದೊರಕುತ್ತಿರಲಿಲ್ಲ ಎಂದರು. ಬಾಲ್ಯದಲ್ಲಿಯೇ ಕಲಾವಿದನಾಗಲು ತಮಗೆ ಸಿಕ್ಕ ಪ್ರೇರಣೆಗಳನ್ನು ನೆನಪು ಮಾಡಿಕೊಂಡ ಅವರು ಚಿತ್ರರಂಗ ತಾಂತ್ರಿಕವಾಗಿ ಬೆಳೆದಿದ್ದರೂ ಅಂತರಂಗದಲ್ಲಿ ಸೊರಗಿರುವುದನ್ನು ಗುರುತಿಸಿದರು. ಇವತ್ತು ಬೇರೆ ಕ್ಷೇತ್ರದಲ್ಲಿ ಯುವಕರು ತೊಡಗಿದ್ದರೂ ಕನ್ನಡತನವನ್ನು ಉಳಿಸಿಕೊಂಡಿದ್ದಾರೆ ಅವರ ಅಭಿವ್ಯಕ್ತಿ ಕ್ರಮಗಳನ್ನು ಗುರುತಿಸುವ ಕೆಲಸ ಆಗಬೇಕು ಕನ್ನಡತನ ನಮ್ಮಲ್ಲಿ ಇದ್ದೇ ಇದೆ. ಅದಕ್ಕೆ ರೂಪ ನೀಡುವ ಕೆಲಸ ಆಗಬೇಕಿದೆ ಎಂದರು. ಪೌರಾಣಿಕ, ಐತಿಹಾಸಿಕ ಚಿತ್ರಗಳಲ್ಲಿ ಭಾಗವಹಿಸುವ ಅವಕಾಶಕ್ಕಾಗಿ ಕಾಯುತ್ತಿರುವೆ  ಬಸವಣ್ಣನ ಪಾತ್ರ ವಹಿಸಲು ದೊರಕಿದ ಅವಕಾಶವನ್ನು ಸ್ಮರಿಸಿಕೊಂಡು. ಕಲಾವಿದ ಹಲವು ಜೀವನ ಸಾಧ್ಯತೆಗಳನ್ನು ತಮ್ಮದಾಗಿಸಿಕೊಂಡಿರುವುದೇ ವಿಶೇಷ ಎಂದರು. ನಿಮ್ಮ ಗಂಟೆಯಲ್ಲಿ ಎಷ್ಟು ಗಂಟೆ ಎಂಬ ಪ್ರಶ್ನೆಗೆ ಎಲ್ಲರ ಗಡಿಯಾರದಲ್ಲಿಯೂ ಸಮಯ ಒಂದೇ ಅದನ್ನು ನಾವು ಹೇಗೆ ಸದುಪಯೋಗಪಡಿಸಿಕೊಳ್ಳುತ್ತೇವೆ ಎನ್ನುವುದು ಮುಖ್ಯ ಎಂದು ಅರ್ಥಪೂರ್ಣವಾಗಿ ಉತ್ತರಿಸಿದರು. ರಮೇಶ್ ಅವರೊಂದಿಗಿನ ಎರಡು ಗಂಟೆಗಳ ಸಂವಾದ ಎರಡು ನಿಮಿಷಗಳಂತೆ ಕಳೆದಿದ್ದು ಪ್ರೇಕ್ಷಕರಿಗೆ ಬಹಳ ಸಂತೋಷನೀಡಿತು.

**ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀ ನೇ.ಭ. ರಾಮಲಿಂಗ ಶೆಟ್ಟಿ ಸ್ವಾಗತಿಸಿದರು. ಗೌರವ ಕೋಶಾಧ್ಯಕ್ಷರಾದ ಡಾ. ಬಿ. ಎಮ್. ಪಟೇಲ್ ಪಾಂಡು ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಪ್ರಕಟಣಾ ವಿಭಾಗದ ಸಂಚಾಲಕರಾದ ಪ್ರೊ. ಎನ್. ಎಸ್. ಶ್ರೀಧರ್ ಮೂರ್ತಿ ಅವರು ರಮೇಶ್ ಅವರೊಂದಿಗಿನ ಪ್ರಶ್ನೋತ್ತರವನ್ನು ಸಂಯೋಜಿಸಿದ್ದರು. ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಡಾ. ಪದ್ಮಿನಿ ನಾಗರಾಜು ಅವರು ವಂದಿಸಿದರು.**

ಛಾಯಾಚಿತ್ರ- ೧) ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ಹಮ್ಮಿಕೊಂಡ ವಿನೂತನ ಹಾಗೂ ವಿಶಿಷ್ಟ ಮಾದರಿ ಕಾರ್ಯಕ್ರಮ 'ಕನ್ನಡದ ಧ್ರುವತಾರೆ- ಸಾಧಕರೊಂದಿಗೆ ಮಾತು-ಕತೆ'  ಸಂವಾದ ಕಾರ್ಯಕ್ರಮವನ್ನು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ಸಿ.ಎನ್. ಮಂಜುನಾಥ ಅವರು ಉದ್ಘಾಟಿಸಿದರು.

೨)  ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡ ವಿನೂತನ ಹಾಗೂ ವಿಶಿಷ್ಟ ಮಾದರಿ ಕಾರ್ಯಕ್ರಮ 'ಕನ್ನಡದ ಧ್ರುವತಾರೆ- ಸಾಧಕರೊಂದಿಗೆ ಮಾತು-ಕತೆ'  ಸಂವಾದ ಕಾರ್ಯಕ್ರಮದಲ್ಲಿ ಮೊದಲ ಅತಿಥಿಯಾಗಿ ಭಾಗವಹಿಸಿದ ಖ್ಯಾತ ಚಲನಚಿತ್ರ ನಟ ಶ್ರೀ ರಮೇಶ್ ಅರವಿಂದ್ ಅವರು ಸಾರ್ವಜನಿಕರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರು.

ಶ್ರೀನಾಥ್ ಜೆ.
ಮಾಧ್ಯಮ ಸಲಹೆಗಾರರು
ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು